## 22. ವಸತಿ ನಿಲಯಗಳಲ್ಲಿ ಸದನ ರಚನೆ ( House System )
## ಮತ್ತು
## ಸದನ ಶಿಕ್ಷಕರ ( House Master ) ಕರ್ತವ್ಯಗಳು ಮತ್ತು ಜವಾಬ್ದಾರಿಗಳು

**ಪೀಠಿಕೆ:–**

ವಸತಿ ಶಿಕ್ಷಣ ಸಂಸ್ಥೆಗಳಲ್ಲಿ ವಸತಿ ನಿಲಯ ಮತ್ತು ಶಾಲೆಗಳು ಒಂದು ನಾಣ್ಯದ ಎರಡು ಮುಖಗಳಿದ್ದಂತೆ ಒಂದಕ್ಕೊಂದು ಪೂರಕ, ವಿದ್ಯಾರ್ಥಿಗಳಲ್ಲಿ ಸರ್ವತೋಮುಖ ಬೆಳವಣಿಗೆ ನಡೆಯಲು ಇವೆರಡು ಸಹಕಾರಿ. ವಿಭಿನ್ನ ಕೌಟುಂಬಿಕ ಹಿನ್ನಲೆಯಿಂದ ಬಂದಿರುವ ಮಕ್ಕಳಿಗೆ ಶೈಕ್ಷಣಿಕ ಮಾರ್ಗದರ್ಶನ, ವೈಯಕ್ತಿಕ ಸ್ವಚ್ಛತೆ, ಇತರ ವಿದ್ಯಾರ್ಥಿಗಳೊಂದಿಗೆ ಹೊಂದಿಕೊಳ್ಳುವ ಮನೋಭಾವದ ಜೊತೆಗೆ ಮನೆಯಿಂದ ಹೊರಗಿದ್ದೇನೆಂಬ ಭಾವನೆಯನ್ನು ಹೋಗಲಾಡಿಸಲು ಸೂಕ್ತ ಮಾರ್ಗದರ್ಶನವನ್ನು ಮಕ್ಕಳಿಗೆ ನೀಡಬೇಕು. ವಸತಿ ಗೃಹಗಳ ವಿದ್ಯಾರ್ಥಿಗಳಲ್ಲಿ ಪರಸ್ಪರ ಜಗಳ. ಕೀಟಲೆ, ಚಿಕ್ಕಪುಟ್ಟ ಕಳ್ಳತನ, ನಿಂದಿಸುವುದು. ಹೀಯಾಳಿಸುವುದು, ರ್‍ಯಾಗಿಂಗ್ ಚಿಕ್ಕಮಕ್ಕಳಿಂದ ಕೆಲಸ ಮಾಡಿಸುವುದು, ಇವುಗಳನ್ನು ತಪ್ಪಿಸಿ ಪರಸ್ಪರ ಸ್ನೇಹ, ಸಹಕಾರ ಭಾವದಿಂದ ವರ್ತಿಸುವಂತೆ ಮಾರ್ಗದರ್ಶನ ನೀಡುವ ಅವಶ್ಯಕತೆಯಿದೆ. ಅದಕ್ಕಾಗಿ ವಸತಿ ನಿಲಯಗಳಲ್ಲಿ ಕೇಂದ್ರಿಯ ಜವಾಹರ್ ನವೋದಯ ಮಾದರಿ ವಸತಿ ಶಾಲೆಗಳಲ್ಲಿ ರಚಿಸಿ ಕಾರ್ಯನಿರ್ವಹಿಸುತ್ತಿರುವಂತೆ ಸದನ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತರುವುದು ಅವಶ್ಯಕವಿದೆ.

ಉದ್ದೇಶಗಳು :–

- ವಿದ್ಯಾರ್ಥಿಗಳಲ್ಲಿ ನಾಯಕತ್ವದ ಬೆಳವಣಿಗೆ
- ಸಮಯ ಪರಿಪಾಲನೆ
- ಸ್ವಯಂ ಶಿಸ್ತು ಅಳವಡಿಕೆ
- ಸೇವಾ ಮನೋಭಾವ
- ಕಲಿಕೆಗೆ ಪರಸ್ಪರ ಸಹಕಾರ
- ಸಹಬಾಳ್ವೆಗೆ ಅವಕಾಶ
- ಅನುಭವ ಹಂಚಿಕೆ
- ಜವಾಬ್ದಾರಿ ಹಂಚಿಕೆ ಮತ್ತು ನಿರ್ವಹಣೆ
- ಸಂಪನ್ಮೂಲಗಳ ಸದ್ಬಳಕೆ ಮತ್ತು ರಕ್ಷಣೆ
- ಪರಿಸರ ಪ್ರೀತಿ ಮತ್ತು ಶುಚಿತ್ವ
- ಕಾಯಕ ಮಹತ್ವದ ಅರಿವು ಮತ್ತು ಅಳವಡಿಕೆ

ಮೇಲ್ಕಂಡ ಗುಣಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಲು ವಸತಿ ಶಾಲೆಗಳಲ್ಲಿ ಅವಕಾಶ ಕಲ್ಪಿಸಬಹುದಾಗಿದೆ.

ಸದನಗಳ ರಚನೆ:-

ವಸತಿ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳನ್ನು ನಾಲ್ಕು ಸದನಗಳಾಗಿ ವಿಂಗಡಿಸುವುದು, ಆ ಗುಂಪುಗಳನ್ನು ...ಯ ವಿದ್ಯಾರ್ಥಿಗಳ ಸದನ ಮತ್ತು ಕಿರಿಯ ವಿದ್ಯಾರ್ಥಿಗಳ ಸದನವೆಂದು ಗುರುತಿಸುವುದು. 9 ಮತ್ತು 10ನೇ ...ತಿ ವಿದ್ಯಾರ್ಥಿಗಳನ್ನು ಹಿರಿಯ ವಿದ್ಯಾರ್ಥಿಗಳ ಸದನಕ್ಕೂ, 6 ರಿಂದ 8ನೇ ತರಗತಿ ವಿದ್ಯಾರ್ಥಿಗಳನ್ನು ಕಿರಿಯ ...ರ್ಥಿಗಳ ಸದನಕ್ಕೂ ಸದನಕ್ಕೂ ವಿಭಾಗಿಸುವುದು, ಎರಡು ವಿಭಾಗಕ್ಕೂ ಪ್ರತ್ಯೇಕವಾಗಿ ಉಸ್ತುವಾರಿ ...ಡಿಕೊಳ್ಳಲು ಶಿಕ್ಷಕರನ್ನು ನೇಮಿಸುವುದು.

ಕಿರಿಯ ಮತ್ತು ಹಿರಿಯ ವಿದ್ಯಾರ್ಥಿಗಳ ವಿಭಾಗದಲ್ಲಿ ಪುನಃ ಹುಡುಗರು ಮತ್ತು ಹುಡುಗಿಯರ ...ಮಗಳನ್ನಾಗಿ ವಿಂಗಡಿಸುವುದು. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ ಕೆಲಸ ...ಹಿಸುತ್ತಿರುವ ಎಲ್ಲಾ ವಸತಿ ಶಿಕ್ಷಣ ಸಂಸ್ಥೆಗಳಲ್ಲೂ ಏಕರೂಪವಾಗಿ ನಾಲ್ಕು ಸದನಗಳನ್ನು ಮಾಡಿ ಈ ಕೆಳಕಂಡಂತೆ ...ಕರಣ ಮಾಡುವುದು.

...ವೇರಿ ಸದನ

...ಂಗಾ ಸದನ

...ಲಪ್ರಭಾ ಸದನ

...ಟಪ್ರಭಾ ಸದನ

ಕರ್ನಾಟಕ ರಾಜ್ಯಾದ್ಯಂತ ಎಲ್ಲ ಶಾಲೆಗಳಲ್ಲಿ ಸದನವಾರು ಬ್ಯಾಡ್ಜ್ ನೀಡುವುದು. ಇದರಿಂದಾಗಿ ಪ್ರಾರ್ಥನೆ ... ಇತರೆ ಕಾರ್ಯಕ್ರಮದಲ್ಲಿ ಒಟ್ಟುಗೂಡಲು ಗುರ್ತಿಸಿಕೊಳ್ಳಲು ಅನುಕೂಲವಾಗುತ್ತದೆ.

...ದ ರಚನೆಯ ರೂಪುರೇಷೆ ಕೆಳಕಂಡಂತಿದೆ

...ಹರಣೆಗೆ, ಒಟ್ಟು ವಸತಿ ಶಿಕ್ಷಣ ಸಂಸ್ಥೆಯಲ್ಲಿರುವ ವಿದ್ಯಾರ್ಥಿಗಳು

...ದ 10ನೇ ತರಗತಿವರೆಗೆ) 250

...ದ ರಚನೆಯ ರೂಪುರೇಷೆ ಕೆಳಕಂಡಂತಿದೆ

...ಹರಣೆಗೆ ಒಟ್ಟು ವಸತಿ ಶಿಕ್ಷಣ ಸಂಸ್ಥೆ

| | |
|---|---|
| ...ದ 10 ನೇ ತರಗತಿವರೆಗೆ) | 250 |
| ... ವಿದ್ಯಾರ್ಥಿಗಳು | ಹಿರಿಯ ವಿದ್ಯಾರ್ಥಿಗಳು |
| ...ದ 8) ತರಗತಿ | (9 ಮತ್ತು 10ನೇ ತರಗತಿ) |
| | 100 |

- ಶಾಲಾ ಆಸ್ತಿ ಕಾಪಾಡಲು ಬದ್ಧರಾಗಿರುವುದು.
- ಪೋಷಕರಿಗೆ ವಸತಿ ಶಾಲೆಗಳ ನಿಯಮ ಹಾಗೂ ಸೌಕರ್ಯಗಳ ಬಗ್ಗೆ ಮನವರಿಕೆ ಮಾಡಿಕೊಡುವುದು.
- ಕಲಿಕೆಯಲ್ಲಿ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಪರಸ್ಪರ ಸಹಕರಿಸುವುದು.

## ಸದನದ ಶಿಕ್ಷಕರ ಕರ್ತ್ಯವ್ಯಗಳು ಮತ್ತು ಜವಾಬ್ದಾರಿಗಳು (Duties of House Master)

ಪ್ರತಿ ಸದನಕ್ಕೆ ಇಬ್ಬರು ಸದನ ಶಿಕ್ಷಕರನ್ನು ನೇಮಿಸುವುದು. ಇವರಲ್ಲಿ ಒಬ್ಬರು ಮುಖ್ಯ ಸದನ ಶಿಕ್ಷಕ ಮತ್ತು ಮತ್ತೊಬ್ಬರು ಸಹಾಯಕ ಸದನ ಶಿಕ್ಷಕರು. ಇವರಲ್ಲಿ ಒಬ್ಬರು ಮಹಿಳಾ ಶಿಕ್ಷಕರಿರಲೇಬೇಕು, ಇವರ ಜೊತೆಗೆ ಪ್ರತಿದಿನವು ಒಬ್ಬರು ಶಿಕ್ಷಕರೂ ಸಹ ಬೆಳಗ್ಗೆ ಪ್ರಾರ್ಥನೆ, ಉಪಹಾರ, ಊಟ, ಸಂಜೆ ಕಾರ್ಯಕ್ರಮಗಳಲ್ಲಿ ಹಾಜರಾತಿಯನ್ನು ದೃಢೀಕರಿಸುವುದು. ಹಾಗೂ ಊಟ ಉಪಹಾರದ ಗುಣಮಟ್ಟದ ಬಗ್ಗೆ ದಾಖಲಿಸುವುದು. ಸದನದ ಶಿಕ್ಷಕರಿಗೆ ಹೆಚ್ಚಿನ ಜವಾಬಾರಿಗಳಿದ್ದು, ಕೆಳಕಂಡ ಕಾರ್ಯಗಳನ್ನು ನಿರ್ವಹಿಸುವುದು. ಈ ಬಗ್ಗೆ ಆಗಿಂದಾಗ್ಗೆ ವಸತಿ ಶಾಲಾ ಮುಖ್ಯಸ್ಥರಿಗೆ ವರದಿ ಮಾಡುವುದು.

- ಸದನದ ನಾಯಕರು ಕ್ರಮವಾಗಿ ಕಾರ್ಯನಿರ್ವಹಿಸುವಂತೆ ಮಾರ್ಗದರ್ಶನ ನೀಡಿ, ಕಾರ್ಯ ಹಂಚಿಕೆ ಮಾಡಿ ಉಸ್ತುವಾರಿ ವಹಿಸುವುದು.
- ದೈನಂದಿನ ಕಾರ್ಯಗಳಲ್ಲಿ ವಿದ್ಯಾರ್ಥಿಗಳು. ಸ್ವಯಂ ಶಿಸ್ತು ಹಾಗೂ ಸಮಯ ಪಾಲನೆ ಮಾಡುವಂತೆ ಕ್ರಮಕೈಗೊಳ್ಳುವುದು.
- ಎಲ್ಲಾ ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗಿರುವ ಬಗ್ಗೆ ಖಾತರಿ ಪಡಿಸಿಕೊಳ್ಳುವುದು.
- ಗೈರು ಹಾಜರಿಯಾದ ವಿದ್ಯಾರ್ಥಿಗಳ ಸ್ಥಿತಿಗತಿ ಹಾಗೂ ಕಾರಣಗಳ ಬಗ್ಗೆ ಪ್ರಾಂಶುಪಾಲರಿಗೆ ವರದಿ ಮಾಡತಕ್ಕದ್ದು.
- ಎಲ್ಲಾ ವಿದ್ಯಾರ್ಥಿಗಳು ಆಯಾ ವೇಳೆಯ ಊಟ/ ಉಪಹಾರಗಳನ್ನು ಸೇವಿಸುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
- ಖಾಯಿಲೆ ಇರುವ ವಿದ್ಯಾರ್ಥಿಗಳು ಆಯಾ ವೇಳೆಯ ಊಟ/ ಉಪಹಾರಗಳನ್ನು ಸೇವಿಸುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
- ತರಗತಿ ವೇಳೆ ಮುಗಿದ ನಂತರ ಅಭ್ಯಾಸ ವೇಳೆಯಲ್ಲಿ ವಿದ್ಯಾರ್ಥಿಗಳ ಕ್ರಮಬದ್ಧವಾಗಿ ವ್ಯಾಸಂಗ ಮಾಡುತ್ತಿರುವ ಬಗ್ಗೆ ಮೇಲ್ವಿಚಾರಣೆ (ಸಹಾಯಕ ಸದನ ಶಿಕ್ಷಕರೊಂದಿಗೆ) ಮಾಡುವುದು.

- ❖ ವಿದ್ಯಾರ್ಥಿಗಳ ಮೇಲ್ವಿಚಾರಣೆ ಮಾಡಲು ವಿದ್ಯಾರ್ಥಿಗಳಲ್ಲಿ ತಂಡಗಳನ್ನು ರಚಿಸಿ. ಆ ತಂಡಗಳಿಗೆ ನಾಯಕ ಮತ್ತು ಉಪನಾಯಕರುಗಳನ್ನು ನೇಮಕ ಮಾಡುವುದು. ಇವರುಗಳ ಸಹಾಯದಿಂದ ವಿದ್ಯಾರ್ಥಿಗಳಲ್ಲಿ ತಂಡಗಳು ತರಗತಿಗಳಿಂದ ಹಾಗೂ ವಸತಿ ಗೃಹಗಳಿಂದ ಸರಿಯಾದ ರೀತಿಯಲ್ಲಿ ಡೈನಿಂಗ್ ಹಾಲ್‌ಗೆ ಹಾಜರಾಗುತ್ತಿರುವ ಬಗ್ಗೆ ಮೇಲ್ವಿಚಾರಣೆ ನಡೆಸುವುದು.
- ❖ ಯಾವುದೇ ತುರ್ತು ಸಂದರ್ಭಗಳಲ್ಲಿ ಶಾಲೆಯ ಹಿತದೃಷ್ಟಿಯಿಂದ ತಕ್ಷಣ ತೀರ್ಮಾನಗಳನ್ನು ತೆಗೆದುಕೊಂಡು ಅದನ್ನು ಪ್ರಾಂಶುಪಾಲರಿಗೆ ವರದಿ ಮಾಡಬಹುದು.
- ❖ ಅಡುಗೆ ಮನೆಗೆ ಪ್ರತಿದಿನ ಸರಬರಾಜು ಮಾಡಲಾಗುವ ಆಹಾರ ಪದಾರ್ಥಗಳನ್ನು ಪರಿಶೀಲಿಸುವುದು.
- ❖ ತಿಳಿಸಬೇಕಾದ ಯಾವುದೇ ಸಲಹೆ ಸೂಚನೆಗಳನ್ನು ಪ್ರಾಂಶುಪಾಲರಿಗೆ ಸಕಾಲದಲ್ಲಿ ವರದಿ ಮಾಡುವುದು.
- ❖ ಎಲ್ಲಾ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸುವುದು.
- ❖ ವಿದ್ಯಾರ್ಥಿಗಳಲ್ಲಿರುವ ಪ್ರತಿಭೆ ಗುರುತಿಸಿ ಅದಕ್ಕೆ ಪ್ರೋತ್ಸಾಹಿಸುವುದು.
- ❖ ಭಾಷಣ, ಸ್ಪರ್ಧೆ, ಆಟಪಾಟ, ಸಂಗೀತ ಸ್ಪರ್ಧೆ ಇತ್ಯಾದಿಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸುವುದು.
- ❖ ವಿದ್ಯಾರ್ಥಿಗಳಲ್ಲಿರುವ ನ್ಯೂನತೆಗಳನ್ನು ಗುರುತಿಸಿ ಅವುಗಳ ನಿವಾರಣೆಗೆ ಪ್ರಯತ್ನಿಸುವುದು. ವಸತಿ ಶಾಲೆಯ ವಿದ್ಯಾರ್ಥಿಗಳು ತಾಲ್ಲೂಕು ಮಟ್ಟದಿಂದ ಹಿಡಿದು ರಾಜ್ಯಮಟ್ಟದವರೆಗಿನ ಎಲ್ಲಾ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸುವಂತೆ ತರಬೇತಿ ನೀಡಿ ಬಹುಮಾನಗಳನ್ನು ಪಡೆಯುವ ನಿಟ್ಟಿನಲ್ಲಿ ಕೆಲಸ ನಿರ್ವಹಿಸುವುದು.
- ❖ ವಸತಿ ಶಾಲಾ ವಿದ್ಯಾರ್ಥಿಗಳು ವಿವಿಧ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸುವುದು.

**ದೈಹಿಕ ಶಿಕ್ಷಕರ ಜವಾಬ್ದಾರಿ ಮತ್ತು ಕರ್ತವ್ಯಗಳು**

ವಸತಿ ನಿಲಯಗಳಲ್ಲಿ ವಾಸಿಸುವ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಮೂಡಿಸಲು ದೈಹಿಕ ಶಿಕ್ಷಕರು ಚಟುವಟಿಕೆಯಿಂದ ಕೆಲಸ ನಿರ್ವಹಿಸಬೇಕು. ಹಾಗೂ ಅವರ ದೈನಂದಿನ ಚಟುವಟಿಕೆಗಳಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಬೇಕಾಗಿರುತ್ತದೆ.

- ❖ ವಿದ್ಯಾರ್ಥಿಗಳು ಬೆಳಗ್ಗೆ ನಿಗಧಿತ ಸಮಯದಲ್ಲಿ ಏಳುವುದು ಮತ್ತು ನಿಗಧಿತ ಸಮಯದಲ್ಲಿ ಮಲಗುವಂತೆ ಸೂಕ್ತ ವ್ಯವಸ್ಥೆ ಮಾಡಬೇಕು.